# ಸಲ್ಲೂ ಮತ್ತು ಪ್ರಿಯಾಂಕಾ



ಪ್ರಿಯಾಂಕಾ ಚೋಪ್ರಾ ಬಗ್ಗೆ ಸಲ್ಮಾನ್ ಖಾನ್ ಸಿಟ್ಟಿಗೆದ್ದಂತಿದೆ. ಆದರೆ ಸಲ್ಲೂ ಮಿಯಾ ತನ್ನ ಸಿಟ್ಟನ್ನು ಎಲ್ಲೂ ಮಾತಿನಲ್ಲಿ ಬಹಿರಂಗ ಪಡಿಸಿಲ್ಲ. ಸಲ್ಮಾನ್ ಅಭಿನಯದ 'ಭಾರತ್' ಸಿನಿಮಾದಲ್ಲಿ ಪ್ರಿಯಾಂಕಾ ನಟಿಸುವುದೆಂದು ಮೊದಲು ನಿರ್ಧಾರವಾಗಿದ್ದರೂ, ಬಳಿಕ ತನ್ನ ಮದುವೆಯ ಕಾರಣ ನೀಡಿ ಪ್ರಿಯಾಂಕಾ ನಟಿಸುವುದರಿಂದ ಹಿಂದೆ ಸರಿದಿದ್ದಳು. ಆದರೆ ಆಕೆ ಹಾಲಿವುಡ್ ಸಿನಿಮಾ 'ಕೌಬಾಯ್ ನಿಂಜಾ ವೈಕಿಂಗ್' ನಲ್ಲಿ ನಟಿಸುವ ಸಲುವಾಗಿ ಸಲ್ಮಾನ್ ನ ಚಿತ್ರವನ್ನು ಕೈಬಿಟ್ಟಳೆಂದು ನಂತರ ಗೊತ್ತಾಯಿತು. ತಕ್ಷಣವೇ ಈ ಚಿತ್ರಕ್ಕೆ ಕತ್ರೀನಾ ಕೈಫ್ ಆಯ್ಕೆಯಾದ ಸುದ್ದಿ ಬಂತು.



ಈಗ ಗೊತ್ತಾಗಿರುವ ಸುದ್ದಿಯೆಂದರೆ, 'ಕೌಬಾಯ್ ನಿಂಜಾ ವೈಕಿಂಗ್'ನ ಶೂಟಿಂಗ್ ಮುಂದಕ್ಕೆ ಹೋಗಿದೆ. ಸದ್ಯಕ್ಕೆ ಪ್ರಿಯಾಂಕಾ ತನ್ನ ಗೆಳೆಯ, ಭಾವೀ ಗಂಡ ನಿಕ್ ಜತೆಗೆ ಮೆಕ್ಸಿಕೋಗೆ ಪ್ರವಾಸ ಹೋಗಿದ್ದಾಳೆ. ಶೀಘ್ರವೇ ಇಟಲಿಯಲ್ಲಿ ಆಕೆಯ ಮದುವೆ ನಡೆಯಲಿದೆಯಂತೆ.

ಗೋವಾದಲ್ಲಿ 'ಬಿಗ್‌ಬಾಸ್' ಸರಣಿಯ ಶೂಟಿಂಗ್‌ಗೆ ಹೋಗಿದ್ದ ಸಲ್ಮಾನ್‌ಗೆ ಪತ್ರಕರ್ತರು ಎದುರಾದಾಗ, ಪ್ರಿಯಾಂಕಾ ನಿರಾಕರಣೆಯ ಬಗ್ಗೆ ಪ್ರಶ್ನೆ ಕೇಳಿದ್ದರು. ಸಲ್ಲೂ ಸಿಟ್ಟನ್ನು ಅಡಗಿಸಿಟ್ಟು ನಗುನಗುತ್ತಲೇ, 'ಆಕೆ ಈಗ ತುಂಬ ಬ್ಯುಸಿ ಆಗಿರುವುದನ್ನು ನೋಡಿ ಸಂತೋಷವಾಗಿದೆ. ಬೇಗ ಮದುವೆಯಾಗಲಿ, ಮಕ್ಕಳನ್ನೂ ಹಡೆಯಲಿ, ಸಂತೋಷದಿಂದ ಬಾಳಿ ಬದುಕಲಿ' ಎಂದಿದ್ದಾನೆ. ಆತ ನಗುತ್ತಲೇ ಹೇಳಿದ್ದರೂ ಮಾತಿನಲ್ಲಿ ಅಡಗಿದ್ದ ವ್ಯಂಗ್ಯ ಪತ್ರಕರ್ತರಿಗೆ ಎದ್ದು ಕಂಡಿದ್ದು ಸುಳ್ಳಲ್ಲ.

ಸಲ್ಲೂ ಮಿಯಾ ಹೇಳಿದ ಇನ್ನೊಂದು ಗುಟ್ಟೆಂದರೆ, 'ವಾಸ್ತವವಾಗಿ ಭಾರತ್ ಸಿನಿಮಾಕ್ಕೆ ಪ್ರಿಯಾಂಕಾ ಚೋಪ್ರಾ ನಮ್ಮ ಮೊದಲ ಆಯ್ಕೆ ಆಗಿರಲಿಲ್ಲ. ನಿರ್ಮಾಪಕ ಅತುಲ್ ಅಗ್ನಿಹೋತ್ರಿ ಕತ್ರೀನಾ ಸೂಕ್ತ ಆಯ್ಕೆ ಎಂದಿದ್ದರು. ಆದರೆ ಪ್ರಿಯಾಂಕಾ ನಿರ್ದೇಶಕ ಅಲಿ ಅಬ್ಬಾಸ್ ಜಫರ್‌ಗೆ ಫೋನ್ ಮಾಡಿ ಚಿತ್ರದಲ್ಲಿ ಅಭಿನಯಿಸುವ ಅಪೇಕ್ಷೆ ವ್ಯಕ್ತಪಡಿಸಿದ್ದಳು. ಹಾಗಾಗಿ ಆಕೆಯ ಹೆಸರನ್ನು ಪರಿಶೀಲಿಸಿದ್ದೆವು. ಸದ್ಯ ಶೂಟಿಂಗ್ ಶುರುವಾಗುವುದಕ್ಕಿಂತ ನಾಲ್ಕು ದಿನ ಮೊದಲೇ ಪ್ರಿಯಾಂಕಾ ನಿರ್ಧಾರ ತಿಳಿಸಿದ್ದು ಒಳ್ಳೆಯದಾಯಿತು. ನಮ್ಮ ಶೂಟಿಂಗ್ ಸಕಾಲಕ್ಕೆ ಶುರುವಾಗಿದೆ.' ಅಂದ ಹಾಗೆ 'ಭಾರತ್' ಸಿನಿಮಾದಲ್ಲಿ ಸಲ್ಮಾನ್ ನದ್ದು 25ರ ಹರೆಯದ ಯುವಕನ ಪಾತ್ರ. ಅದಕ್ಕಾಗಿ 14 ದಿನಗಳ ಕಾಲ ಸಾಕಷ್ಟು ಬೆವರು ಹರಿಸಿ, ದೇಹದ ಆಕೃತಿಯನ್ನು ಸಲ್ಲೂ ಪೂರ್ತಿ ಬದಲಾಯಿಸಿಕೊಂಡಿದ್ದಾನೆ.

ಪ್ರಿಯಾಂಕಾ ಮದುವೆ ನಿಶ್ಚಿತಾರ್ಥದ ಸಮಾರಂಭಕ್ಕೆಂದು ಇತ್ತೀಚೆಗೆ ಮುಂಬೈಗೆ ಬಂದಾಗ ಈ ಹಿಂದೆ ಒಪ್ಪಿಕೊಂಡ ಹಿಂದಿ ಸಿನಿಮಾ 'ದಿ ಸ್ಕೈ ಈಸ್ ಪಿಂಕ್' ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದಳು. ಶೊನಾಲಿ ಬೋಸ್ ನಿರ್ದೇಶನದ ಈ ಚಿತ್ರ, ಎರಡು ವರ್ಷಗಳ ಬಳಿಕ ಪ್ರಿಯಾಂಕಾ ನಟಿಸಿರುವ ಮೊದಲ ಬಾಲಿವುಡ್ ಚಿತ್ರ ಎಂದಾಗಲಿದೆ. ಈ ಚಿತ್ರದ ನಾಯಕ ಫರ್ಹಾನ್ ಅಖ್ತರ್. ಅಂದ ಹಾಗೆ ಸಲ್ಲೂ ಕೋಪಕ್ಕೆ ಪ್ರಿಯಾಂಕಾ ಎಳ್ಳಷ್ಟೂ ತಲೆ ಕೆಡಿಸಿಕೊಂಡಿಲ್ಲವಂತೆ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65